**ಸಮಗ್ರ ಶಿಕ್ಷಣ – ಕರ್ನಾಟಕ,**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡಗಳ ಪೂರಕಕಟ್ಟಡ, ನೃಪತುಂಗರಸ್ತೆ, ಬೆಂಗಳೂರು–560001**

---

**ಅನುಬಂಧ–01**

2021–22ನೇ ಸಾಲಿನ 1 ರಿಂದ 3ನೇ ಉಭಯ ಮಾಧ್ಯಮ (ಬೈಲಿಂಗ್ವಲ್) ತರಗತಿಗಳ ಬೋಧನಾ–ಕಲಿಕಾ/ಮೌಲ್ಯಮಾಪನ ಪದ್ಧತಿಯ ಅನುಷ್ಠಾನದ ಮಾರ್ಗಸೂಚಿ

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದ ಹಿನ್ನೆಲೆಯಲ್ಲಿ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳ 01 ರಿಂದ 03ನೇ ತರಗತಿ ಹಾಗೂ ಉರ್ದು ಮಾಧ್ಯಮದ 01 ಮತ್ತು 02ನೇ ತರಗತಿವರೆಗಿನ ಕಲಿಕೆಯನ್ನು ನಲಿಕಲಿ ಬೋಧನಾ ಕಲಿಕಾ ಪದ್ಧತಿಯ ಮಾದರಿಯಲ್ಲಿ ಅನುಷ್ಠಾನಿಸಲು ಇತ್ತೀಚಿನ ಬೆಳವಣಿಗೆಯಲ್ಲಿ ಸಾಧ್ಯವಾಗುತ್ತಿಲ್ಲ. ಮಕ್ಕಳು ಶಾಲೆಗೆ ಬರಲಾಗದಂತಹ ಸ್ಥಿತಿಯಲ್ಲಿ ಬಹುಹಂತದ ತರಗತಿ ಸಂಯೋಜಿತ ಕಲಿಕಾ ಪದ್ಧತಿಯ ಮಾದರಿಯನ್ನು ಶಾಲೆ ಹೊರತಾದ ಅನೌಪಚಾರಿಕ ಸನ್ನಿವೇಶದಲ್ಲಿ ಸೂಕ್ತವಾಗಿ ಅಳವಡಿಸಲು ಮತ್ತು ಪದ್ಧತಿಯ ನಿಯಮದಂತೆಯೇ ಅದನ್ನು ಅನುಪಾಲನೆಗೊಳಿಸಲು ಪ್ರಸ್ತುತ ಪರಿಸ್ಥಿತಿಯು ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅಗತ್ಯ ಮಾರ್ಪಾಡುಗಳನ್ನು ಮಾಡಿಕೊಳ್ಳಲಾಗಿದ್ದು ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಮುಖ ಅಂಶಗಳು ಹೀಗಿವೆ.

1) ಸೇತುಬಂಧ ಕಲಿಕೆ ಕುರಿತ ಅಂಶಗಳು:

- ದ್ವಿಭಾಷೆ (ಬೈಲಿಂಗ್ವೆಲ್) ಮಾಧ್ಯಮದ ತರಗತಿಗಳಲ್ಲಿ ಸೇತುಬಂಧ ಕಲಿಕೆಗಾಗಿ ಒಟ್ಟು 45 ದಿನಗಳನ್ನು ನಿಗದಿಪಡಿಸಲಾಗಿದೆ.
- ಒಂದನೇ ತರಗತಿಯ ಕಲಿಕೆಯಲ್ಲಿ ಸೇತುಬಂಧ ಕಲಿಕೆಗೆ ನಿರ್ದಿಷ್ಟ ದಿನಗಳ ಅವಧಿಗಳು ಪ್ರತ್ಯೇಕವಾಗಿ ಇರದೇ ಶಾಲೆ ಪ್ರಾರಂಭವಾದ ದಿನದಿಂದಲೇ ಸದರಿ ತರಗತಿಯಲ್ಲಿ ಕಲಿಕೆಯು ವರ್ಷಾಂತ್ಯದವರೆಗೂ ನಿರಂತರವಾಗಿ ಸಾಗುತ್ತದೆ.
- 01, 02 ಮತ್ತು 03ನೇ ತರಗತಿ ಕಲಿಕೆಯ ಸೇತುಬಂಧ ಚಟುವಟಿಕೆಗಳನ್ನು ತರಗತಿವಾರು ಪ್ರತ್ಯೇಕವಾಗಿ 45 ದಿನಗಳಿಗೆ ಸಿದ್ಧಪಡಿಸಲಾಗಿದೆ. ಈ ಹಂತದಲ್ಲಿ ಹಿಂದಿನ ತರಗತಿ ಕಲಿಕೆಯ ಬುನಾದಿ ಸಾಮರ್ಥ್ಯಗಳನ್ನು ಅಥವಾ ಪರಿಕಲ್ಪನೆಗಳನ್ನು ಒರೆಹಚ್ಚುವ ಹಾಗೂ ಅಗತ್ಯ ಕಲಿಕೆಗೆ ಪ್ರೇರೇಪಿಸುವ ಸ್ವ–ಕಲಿಕಾ ಆಧಾರಿತ ಚಟುವಟಿಕೆಗಳನ್ನು ಸಹ ಸಿದ್ಧಪಡಿಸಿದೆ.
- ತರಗತಿವಾರು ನಿಗದಿಪಡಿಸಿದ 45 ದಿನಗಳ ಪಠ್ಯವಸ್ತುವಿನ ಮಾದರಿಯನ್ನು ಇಲಾಖೆ ವತಿಯಿಂದಲೇ ನೀಡಲಾಗುವುದು. ಶಿಕ್ಷಕರು ಘಟಕದ ವಿಷಯವಾರು ಶಿಕ್ಷಕರು ಸೇತುಬಂಧ ಮಾದರಿಯ ಅನುಷ್ಠಾನಕ್ಕೆ ಬೇಕಾದ ಕಲಿಕಾ ಚಟುವಟಿಕೆಗಳಿಗೆ ಪೂರಕ ಸಿದ್ಧತೆಗಳನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.
- ಸೇತುಬಂಧದ ಮಾದರಿಯಲ್ಲಿ ತರಗತಿವಾರು, ವಿಷಯವಾರು, ದಿನವಾರು ಕಲಿಕೆಯ ಅಂಶಗಳನ್ನು, ಸೂಕ್ತ ಕಲಿಕಾ ಸಾಮಗ್ರಿಗಳನ್ನು ಮತ್ತು ಮೌಲ್ಯಮಾಪನದ ವಿಧಾನಗಳನ್ನು ಮ್ಯಾಪಿಂಗ್ ಮಾಡಲಾಗಿರುತ್ತದೆ.
- ತರಗತಿ–01ರಲ್ಲಿನ ಮಕ್ಕಳಿಗೆ ಮನೆಯಲ್ಲೇ ಪೋಷಕರ ಅಥವಾ ಅನುಕೂಲಕರ ಸಹಾಯದಿಂದ ಸುಲಭವಾಗಿ ಕಲಿಯಲು ಸಿದ್ಧಪಡಿಸಿರುವ Transition Period ಚಟುವಟಿಕೆಗಳನ್ನು 45 ದಿನಗಳಲ್ಲಿ ಪೂರ್ಣಗೊಳಿಸಿ, **“ರೀಡರ್ ಕಮ್ ವರ್ಕ್‌ಬುಕ್‌ಗಳ”** ಪಠ್ಯವಸ್ತುವಿನ ಕಲಿಕೆಯು ವರ್ಷಾಂತ್ಯದವರೆಗೂ ನಿರಂತರವಾಗಿ ಸಾಗುತ್ತದೆ.

- ತರಗತಿ–2ಕ್ಕೆ ಹಾಗೂ ತರಗತಿ–3ಕ್ಕೆ ಸಂಬಂಧಿಸಿದಂತೆ ಕಲಿಕಾಂಶವನ್ನು ಆಧರಿಸಿ 45 ದಿನಗಳ ಸೇತುಬಂಧದ ಕಲಿಕೆಯನ್ನು ನಿರ್ವಹಿಸಿದ ನಂತರ, **'ರೀಡರ್ ಕಮ್ ವರ್ಕ್‌ಬುಕ್‌ಗಳ'** ಪಠ್ಯವಸ್ತುವಿನ ಕಲಿಕೆಯು ವರ್ಷಾಂತ್ಯದವರೆಗೂ ನಿರಂತರವಾಗಿ ಸಾಗುತ್ತದೆ.

2. **ಮೌಲ್ಯಮಾಪನ ಕ್ರಮ ಮತ್ತು ದಾಖಲೆ ನಿರ್ವಹಣೆ ಕುರಿತ ಅಂಶಗಳು:**

    - ಸೇತುಬಂಧ ಕಲಿಕೆಯಲ್ಲಿ ಅಂದರೆ, 45 ದಿನಗಳ ಕಲಿಕಾ ಪ್ರಕ್ರಿಯೆಯಲ್ಲಿ ಒಟ್ಟು 03 ಮೌಲ್ಯಮಾಪನ ಹಂತವನ್ನು ಗುರುತಿಸಿಕೊಳ್ಳಲಾಗಿದೆ. **15 ದಿನ, 30 ದಿನ ಹಾಗೂ 45 ದಿನಗಳ ನಂತರ ಇದನ್ನು ಕಡ್ಡಾಯವಾಗಿ ಅನುಷ್ಠಾನಿಸುವುದು. ಈ ಸಂದರ್ಭದಲ್ಲಿ ಮೌಲ್ಯಮಾಪನಕ್ಕೆ ಪೂರಕವಾದ ಅಭ್ಯಾಸದ ಹಾಳೆಗಳನ್ನು ಬಳಸಬೇಕು.**
    - ಸೇತುಬಂಧಕ್ಕೆ ನಿರ್ದಿಷ್ಟಪಡಿಸಿದ ಕಲಿಕೆಯ ದಿನಗಳು ಪೂರ್ಣಗೊಂಡ ನಂತರ, ಪ್ರತೀ ಮಗುವೂ ತರಗತಿವಾರು ನಿರ್ದಿಷ್ಟಪಡಿಸಿದ **ಪ್ರಸಕ್ತ ಸಾಲಿನ ಪಠ್ಯ ಕಲಿಕೆಗೆ ಪ್ರವೇಶ ಪಡೆದುಕೊಳ್ಳುತ್ತದೆ.**
    - **ಮೌಲ್ಯ ಮಾಪನ ದಾಖಲೀಕರಣ ನಮೂನೆ**

| | | ತರಗತಿ | | | | | | | | ವಿಷಯ: | | | | | | | | |
|---|---|---|---|---|---|---|---|---|---|---|---|---|---|---|---|---|---|---|
| | | **15 ದಿನಗಳ ನಂತರ** | | | | **30 ದಿನಗಳ ನಂತರ** | | | | **45 ದಿನಗಳ ನಂತರ** | | | | ಒಟ್ಟು | | | | |
| ಕ್ರ.ಸಂ | ವಿದ್ಯಾರ್ಥಿಯ ಹೆಸರು | ಆಲಿಸು | ಮಾತನಾಡು | ಓದು | ಬರವಣಿಗೆ | ಆಲಿಸು | ಮಾತನಾಡು | ಓದು | ಬರವಣಿಗೆ | ಆಲಿಸು | ಮಾತನಾಡು | ಓದು | ಬರವಣಿಗೆ | ಆಲಿಸು | ಮಾತನಾಡು | ಓದು | ಬರವಣಿಗೆ | ಷರಾ |
| | | | | | | | | | | | | | | | | | | |

- ಮಗುವಿನ ಪ್ರಸ್ತುತ ವರ್ಷಕ್ಕೆ ನಿಗದಿಪಡಿಸಿದ ಕಲಿಕಾ ಪಠ್ಯವಸ್ತುವಿಗೆ ಸಂಬಂಧಿಸಿದಂತೆ ಒಟ್ಟು ನಾಲ್ಕು ಎಫ್.ಎ.ಗಳು ಮತ್ತು ಎರಡು ಎಸ್.ಎಗಳನ್ನು ಅನುಬಂಧ ಎರಡರಲ್ಲಿ ಸೂಚಿಸಿರುವಂತೆ ನಿರ್ವಹಿಸತಕ್ಕದ್ದು.
- ಪ್ರತೀ ಮೌಲ್ಯಮಾಪನದ ಹಂತದಲ್ಲಿ ಕಲಿಕೆಯನ್ನು ಒರೆ ಹಚ್ಚಲು ಮಗುವಿನ ಮನೆಗೆ ಪೂರಕ ಅಭ್ಯಾಸ/ಚಟುವಟಿಕಾ ಹಾಳೆಗಳನ್ನು **ಆನ್‌ಲೈನ್ ಅಥವಾ ಆಫ್ಲೈನ್** ಮೂಲಕ ತಲುಪಿಸುವುದು ಹಾಗೂ ಅವುಗಳನ್ನು ಪೂರ್ಣಗೊಳಿಸಿದ ನಂತರ ಮರಳಿ ಪಡೆದು ಮಕ್ಕಳ ಕಲಿಕೆಯ ಸಾಧನೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು. ಪೂರಕ ಹಿಮ್ಮಾಹಿತಿ ನೀಡುವ ಮೂಲಕ ಕಲಿಕೆಯನ್ನು ನಿರ್ದಿಷ್ಟ ಉದ್ದೇಶದ ಈಡೇರಿಕೆಗೆ ಆಗುವಂತೆ ಪ್ರೇರೇಪಿಸುವುದು.
- ಕಲಿಕೆಯ ಮೌಲ್ಯಮಾಪನಕ್ಕಾಗಿ ಬಳಸಲಾದ **ಅಭ್ಯಾಸದ ಹಾಳೆ**ಗಳನ್ನು ಮರಳಿ ಪಡೆದ ನಂತರ **ಪೂರ್ಣ ಸರಿ ಉತ್ತರ ಇದ್ದರೆ 'ಎ', ಉತ್ತರ ತಪ್ಪಾಗಿದ್ದರೆ 'ಬಿ' ಶ್ರೇಣಿ** ನೀಡಿ ಮೌಲ್ಯಮಾಪನ ಮಾಡುವುದರೊಂದಿಗೆ ಹಿಮ್ಮಾಹಿತಿ ನೀಡಬೇಕು.
- ಸರಾಸರಿ ಸಾಧನೆ ಆಧರಿಸಿ ಅನುಬಂಧ–2ರಲ್ಲಿ ನೀಡಿರುವ ಸೂಚ್ಯಾಂಕಗಳನ್ನು ಪರಿಗಣಿಸಿ, ಶ್ರೇಣಿಗಳನ್ನು ನೀಡುವುದು. ಮೌಲ್ಯಮಾಪನ ವಹಿಯಲ್ಲಿ ದಾಖಲಿಸಿಕೊಳ್ಳುವುದು. ಕಲಿಕಾಂಶವನ್ನು ಗಳಿಸದಿರುವ ವಿದ್ಯಾರ್ಥಿಗಳಿಗೆ ಪೂರಕ ಚಟುವಟಿಕೆಗಳನ್ನು ಮಾಡಿಸುವ ಮೂಲಕ ಕಲಿಕಾ ಕೊರತೆ ತುಂಬಲು ಪ್ರಯತ್ನಿಸುವುದು.
- ಮಕ್ಕಳು ಮಾಡಿದ ಅಭ್ಯಾಸದ ಹಾಳೆಗಳನ್ನು **ಮಕ್ಕಳ ಪೋರ್ಟ್‌ಫೋಲಿಯೋದಲ್ಲಿ** ಸಂಗ್ರಹಿಸಿಟ್ಟುಕೊಳ್ಳುವುದು. ಆದರೆ ಕೆಲವು ಸಂದರ್ಭಗಳಲ್ಲಿ ಮೌಲ್ಯಮಾಪನದ ಚಟುವಟಿಕೆಗಳನ್ನು ಮಕ್ಕಳು ಮಾಡದೆ ಇದ್ದಲ್ಲಿ ಅಭ್ಯಾಸದ ಹಾಳೆಗಳನ್ನು ಪರಿಗಣಿಸಿ ಮೌಲ್ಯಮಾಪನದ ಶ್ರೇಣಿಯನ್ನು ನೀಡುವುದು.

- ಮಕ್ಕಳ ಕಲಿಕಾ ಸಾಧನೆಯ ಮೌಲ್ಯಮಾಪನದ ದಾಖಲೆಗಳ ನಿರ್ವಹಣೆ ಅತ್ಯಗತ್ಯವಾಗಿದ್ದು, ಯಾವುದೇ ಸಂದರ್ಭದಲ್ಲಿ ಯಾವುದೇ ಹಂತದ ಮೇಲಾಧಿಕಾರಿಗಳು ದಾಖಲೆ ನಿರ್ವಹಣಾ ಕ್ರಮವನ್ನು ಅನುಪಾಲನೆಗೆ ಒಳಪಡಿಸುವ ಸಾಧ್ಯತೆ ಇರುತ್ತದೆ ಎಂಬುದನ್ನು ಗಮನಿಸತಕ್ಕದ್ದು.

3. **ಅಭ್ಯಾಸ/ ಚಟುವಟಿಕಾ ಹಾಳೆಗಳ ವಿನ್ಯಾಸ ಮತ್ತು ಬಳಕೆ ಕುರಿತ ಅಂಶಗಳು:**
   - 45 ದಿನಗಳ ನಲಿಕಲಿ ಸೇತುಬಂಧ ಮಾದರಿಗೆ ಪೂರಕವಾಗಿ ವಿಷಯವಾರು, ತರಗತಿವಾರು ಅಗತ್ಯವಿರುವ ಸ್ವಕಲಿಕಾ ಆಧಾರಿತ ಚಟುವಟಿಕೆಯ ಹಾಳೆಗಳನ್ನು ಸಹ ರಾಜ್ಯ ಸಂಪನ್ಮೂಲ ವ್ಯಕ್ತಿಗಳ ನೆರವಿನೊಂದಿಗೆ ವಿನ್ಯಾಸಗೊಳಿಸಲಾಗಿದೆ. ಇದನ್ನು ಸೇತುಬಂಧ ಮಾದರಿಯೊಂದಿಗೆ ಅನುಬಂಧಿಸಿ ತಲುಪಿಸಲಾಗುವುದು.
   - ಇಲಾಖೆ ವಿನ್ಯಾಸಗೊಳಿಸಿದ ಅಭ್ಯಾಸದ ಕನಿಷ್ಠ ಕೆಲವು ಹಾಳೆಗಳನ್ನು(**Work Sheet**) ಪ್ರತೀ ಮಗುವೂ ಬಳಸುವುದು ಕಡ್ಡಾಯ. ಹೆಚ್ಚುವರಿ ಸೃಜನಾತ್ಮಕ ಅಭ್ಯಾಸದ ಹಾಳೆಗಳ ಅಗತ್ಯತೆ ಇದ್ದಲ್ಲಿ, ವಿಷಯವಾರು ಶಿಕ್ಷಕರು ಸ್ಥಳೀಯ ಅವಶ್ಯಕತೆ, ಲಭ್ಯ ಸಂಪನ್ಮೂಲಗಳನ್ನು ಆಧರಿಸಿ, ಕ್ರಿಯಾಶೀಲವಾಗಿ ರೂಪಿಸಿ ಬಳಸಬಹುದಾಗಿದೆ. **ಪ್ರತೀ ಶಾಲೆಯು ತಮ್ಮಲ್ಲಿ ಲಭ್ಯವಿರುವ ಶಾಲಾನುದಾನದಿಂದಲೇ ಚಟುವಟಿಕೆ/ಅಭ್ಯಾಸದ ಹಾಳೆಗಳನ್ನು ಮಕ್ಕಳಿಗೆ ಒದಗಿಸಲು ಕ್ರಮವಹಿಸತಕ್ಕದ್ದು.**
   - ಅಭ್ಯಾಸ/ಚಟುವಟಿಕೆಯ ಹಾಳೆಗಳನ್ನು **ಆನ್‌ಲೈನ್ ಹಾಗೂ ಆಫ್ಲೈನ್** ಮೂಲಕವೂ ಮಕ್ಕಳಿಗೆ ತಲುಪಿಸಬಹುದಾಗಿರುತ್ತದೆ. ಮಕ್ಕಳ ಕಲಿಕೆಗೆ ನೆರವು ನೀಡಲು ಅಗತ್ಯವಿರುವ ಸೂಚನೆ/ಮಾರ್ಗದರ್ಶನಗಳನ್ನು ಸಹ ಪೋಷಕರಿಗೂ ಸ್ಪಷ್ಟ ಪಡಿಸಬೇಕು. ಇವುಗಳನ್ನು ಮಕ್ಕಳಿಗೆ ನೀಡಿದ ಮತ್ತು ಹಿಂಪಡೆದ ಬಗ್ಗೆ ಸೂಕ್ತ ದಾಖಲೆ ಇರಿಸಿಕೊಳ್ಳುವುದು.
   - ಕೆಲವು ಅಭ್ಯಾಸದ ಹಾಳೆಗಳಲ್ಲಿ ***QR CODE/video and audio Link*** ಅಳವಡಿಸಿದ್ದು, ವಿಡಿಯೋ ಮತ್ತು ಆಡಿಯೋಗಳನ್ನು ಉಪಯೋಗಿಸಿ ಮಕ್ಕಳು ಹೆಚ್ಚಿನ ಅನುಭವ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅಭ್ಯಾಸದ ಹಾಳೆಗಳಲ್ಲಿ ನೀಡಿರುವ **QR CODE** ಬಳಸುವ ಬಗ್ಗೆ ಸೂಕ್ತ ತಿಳುವಳಿಕೆಯನ್ನು ಪೋಷಕರಿಗೆ ನೀಡುವುದು.

**ಗಮನಕ್ಕೆ:** ಕನ್ನಡ ಭಾಷಾ ಕಲಿಕೆಯ ತಂತ್ರಗಳಿಗೆ ಕುರಿತಂತೆ ನಲಿ–ಕಲಿ ಪದ್ಧತಿಯಲ್ಲಿ ಕನ್ನಡ ಭಾಷೆಯ ಕಲಿಕೆಗೆ ಸಿದ್ಧಪಡಿಸಿದ ಅಭ್ಯಾಸದ ಹಾಳೆಗಳನ್ನು ಸಹ ಇಲ್ಲಿನ ವ್ಯವಸ್ಥೆಯಲ್ಲಿ ಕಲಿಯುತ್ತಿರುವ ಎಲ್ಲಾ ಮಕ್ಕಳಿಗೂ ಬಳಸಿಕೊಳ್ಳತಕ್ಕದ್ದು.